೭) ೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ಸುಂಕ) (ತಿದ್ದುಪಡಿ) ನಿಯಮಾವಳಿಗೆ ಸಂಬಂಧಿಸಿದ ೧೯೮೭ನೇ ಜೂನ್ ೨೯ನೇ ದಿನಾಂಕದಂದು ಹೊರಡಿಸಲಾದ ಹೆಚ್‌ಡಿ/೧೧/ಟಿಇಎಸ್/೮೭ನೇ ಕ್ರಮಾಂಕದ ಅಧಿಸೂಚನೆ,

೮) ೧೯೮೫ನೇ ಇಸವಿಯ ಮಾದಕ ಔಷಧಿ ಮತ್ತು ಮಾದಕ ದ್ರವ್ಯಗಳ ಅಧಿನಿಯಮದ ೭೮(೩)ನೇ ಕಲಮಿನ ಮೇರೆಗೆ—

೧೯೮೫ನೇ ಇಸವಿಯ ಮಾದಕ ಔಷಧಿಗಳು ಮತ್ತು ಮಾದಕ ದ್ರವ್ಯಗಳ (ಕರ್ನಾಟಕ) ನಿಯಮಾವಳಿಗೆ ಸಂಬಂಧಿಸಿದಂತೆ ೧೯೮೫ನೇ ನವೆಂಬರ್ ೧೪ನೇ ದಿನಾಂಕದಂದು ಹೊರಡಿಸಲಾದ ಹೆಚ್‌ಡಿ/೧೬೧/ಇಡಿಸಿ/೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೪) ಶ್ರೀ ಕೆ. ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಹಾಗೂ ಒಣ ಭೂ ಅಭಿವೃದ್ಧಿ ರಾಜ್ಯ ಮಂತ್ರಿ)—

ಭಾರತದ ಸಂವಿಧಾನದ ೨೧೩ (೨)ನೇ ಅನುಚ್ಛೇದದ ಮೇರೆಗೆ ೧೯೮೭ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನ ವಾರಾಟ (ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

೧೨-೩೦ ಪಿ.ಎಂ.

## ವರದಿಗಳನ್ನೊಪ್ಪಿಸುವುದು

ಶ್ರೀ ಕೆ. ಹೆಚ್. ಶ್ರೀನಿವಾಸ್ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಈ ಕೆಳಕಂಡ ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

೮) ವಿನಿಯೋಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ನೇ ಸಾಲಿನಿಂದ ೧೯೮೩-೮೪ನೇ ಸಾಲುಗಳವರೆಗಿನ ಹಣ ವಿನಿಯೋಗ ಹಾಗೂ ವಿತ್ತೀಯ ಲೆಕ್ಕಪತ್ರಗಳ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ ವರದಿಗಳ (ಸಿವಿಲ್) ಮೇಲಿನ ಹದಿನೆಂಟನೇ ವರದಿ.

೯) ಹಣಕಾಸು ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ನೇ ಸಾಲಿನಿಂದ ೧೯೮೩-೮೪ನೇ ಸಾಲುಗಳವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾಲೇಖಾ ಪರೀಕ್ಷಕರ (ಸಿವಿಲ್ ಹಾಗೂ ಕಂದಾಯ) ಮೇಲಿನ ಹತ್ತೊಂಭತ್ತನೇ ವರದಿ.

೧೦) ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ನೇ ಸಾಲಿನಿಂದ ೧೯೮೩-೮೪ನೇ ಸಾಲುಗಳವರೆಗಿನ ಹಣವಿನಿಯೋಗ ಹಾಗೂ ವಿತ್ತೀಯ ಲೆಕ್ಕಪತ್ರಗಳು ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪಾಲಕರ (ಸಿವಿಲ್) ವರದಿಯ ಮೇಲಿನ ಇಪ್ಪತ್ತನೇ ವರದಿ.

೧೧) ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ನೇ ಸಾಲಿನಿಂದ ೧೯೮೩-೮೪ನೇ ಸಾಲುಗಳವರೆಗಿನ ಹಣ ವಿನಿಯೋಗ ಹಾಗೂ ವಿತ್ತೀಯ ಲೆಕ್ಕಪತ್ರಗಳು ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾಲೇಖಾಪಾಲಕರ (ಸಿವಿಲ್) ವರದಿಯ ಮೇಲಿನ ಇಪ್ಪತ್ತೊಂದನೆಯ ವರದಿ.

ಅಧ್ಯಕ್ಷರು.—ಮೇಲ್ಕಂಡ ವರದಿಗಳನ್ನು ಸಭೆಗೆ ಒಪ್ಪಿಸಲಾಗಿದೆ.

ಶ್ರೀ ಎಸ್. ಎಸ್. ಕಡಪಟ್ಟಿ (ಅಧ್ಯಕ್ಷರು, ಅಂದಾಜುಗಳ ಸಮಿತಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೇಲೆ ಸಲ್ಲಿಸಿದ್ದ ಮೊದಲನೆಯ

ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ, ಫಲಹೆಗಳ ಮೇಲೆ, ಸರಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಅಂದಾಜು ಸಮಿತಿಯ ನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ಮೇಲ್ಕಂಡ ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ.

SRI J. A. FERNANDEZ.—I wish to present the Second Report of the Committee on Papers laid on the Table.

ಅಧ್ಯಕ್ಷರು.—ಮೇಲ್ಕಂಡ ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

## ನಿಲುವಳಿ ಸೂಚನೆಯ ಪ್ರಸ್ತಾವ (ಅನುಮತಿ ಕೋರಿಕೆ)
## ರಾಜ್ಯದಲ್ಲಿ ತಲೆದೋರಿರುವ ಭೀಕರ ಬರದ ಬಗ್ಗೆ

ಅಧ್ಯಕ್ಷರು.—ಈಗ ಅಡ್ಜರ್ನ್‌ಮೆಂಟ್ ಮೋಷನ್. ಒಟ್ಟು ೪ ನಾಲ್ಕು ಜನ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದಾರೆ. ಎಂ. ಎಸ್. ಕೃಷ್ಣನ್‌ರವರು ಈ ದಿನ ಬೆಳಿಗ್ಗೆ ೯–೫೫ಕ್ಕೆ ಕೊಟ್ಟಿದ್ದಾರೆ. ೧೦–೨೦ ಗಂಟೆಗೆ ಆರ್. ವೆಂಕಟರಾಮಯ್ಯನವರು ಕೊಟ್ಟಿದ್ದಾರೆ. ೧೦–೪೦ ಗಂಟೆಗೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಕೊಟ್ಟಿದ್ದಾರೆ. ೧೦–೪೫ ಗಂಟೆಗೆ ಎಂ. ಎಂ. ಖಿರ್ಗಿಯವರು ಕೊಟ್ಟಿದ್ದಾರೆ. ಈ ನಾಲ್ಕು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ನಾನು ಯಾವುದನ್ನೂ ರಿಜೆಕ್ಟ್ ಮಾಡುವುದಕ್ಕೆ ಹೋಗಿಲ್ಲ. ಆದರೆ, ಎಂ. ಎಸ್. ಕೃಷ್ಣನ್‌ರವರು ಮೊದಲಂ ಕೊಟ್ಟಿರುವುದರಿಂದ ಅವರದನ್ನು ಮೊ ದ ಲಂ ತೆಗೆದುಕೊಳ್ಳೋಣ. ಮಾನ್ಯ ಮಂತ್ರಿಯವರು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಇನ್ನೇನಾದರೂ ವಿಷಯ ಇದ್ದಲ್ಲಿ, ಮಧ್ಯಾಹ್ನ ೩ ಗಂಟೆಗೆ ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ಅದರಲ್ಲಿ ಎಲ್ಲಾ ಮಾತನಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಬಿಸ್‌ನೆಸ್ ಅಡ್ವೈಸರಿ ಕಮಿಟಿ ಬಗ್ಗೆ ತಮ್ಮಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಹೋದಸಾರಿ ಸೆಷನ್ ಕರೆದಾಗಲೂ ಬಿಸ್‌ನೆಸ್ ಅಡ್ವೈಸರಿ ಕಮಿಟಿಗೆ ನಮ್ಮಲ್ಲಿ ಯಾರನ್ನೂ ಕರೆಯಲಿಲ್ಲ. ಅವರೇ ಎಲ್ಲಾ ಸೇರಿಕೊಂಡು ಬಿಸ್‌ನೆಸ್‌ನ್ನು ಫಿಕ್ಸ್ ಮಾಡಿದ್ದಾರೆ, ಟೈಮ್ ಮುಂತಾದವುಗಳನ್ನೆಲ್ಲಾ ಫಿಕ್ಸ್ ಮಾಡಿದ್ದಾರೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿ ಇರುವುದೂ, ನಾವು ಅವರು ಎಲ್ಲರೂ ಸೇರಿಕೊಂಡು ಸದನದ ಬಿಸ್‌ನೆಸ್‌ನ್ನು ಹೇಗೆ ನಡೆಸಬೇಕೆಂದೂ ಸಮಯವನ್ನು ಫಿಕ್ಸ್ ಮಾಡಬೇಕು. ಅದು ಬಿಟ್ಟು ಅವರು ಹೇಳಿದ್ದನ್ನೇ ಕೇಳಿಕೊಂಡು ತಾವೇ ಬಿಸ್‌ನೆಸ್‌ನ್ನು ಫಿಕ್ಸ್ ಮಾಡುವ ಹಾಗಿದ್ದರೆ ನಾವು ಇಲ್ಲಿಗೆ ಬರುವ ಅಗತ್ಯವೂ ಇಲ್ಲ. ಬಿಸ್‌ನೆಸ್‌ಗೆ ಸಹಕಾರ ಕೊಡುವುದಕ್ಕೆ ಸಾಧ್ಯವೂ ಇಲ್ಲವೆಂದು ಹೇಳಬೇಕಾಗುತ್ತದೆ. ನಿಯಮದಂತೆ ನಡೆಯಬೇಕಾದುದು ಅತ್ಯಗತ್ಯವಾಗಿದೆ. ಬಿಸ್‌ನೆಸ್ ಬಗ್ಗೆ ನಮಗೆ ಏನೂ ಗೊತ್ತಿಲ್ಲದೆ, ಟೈಮ್ ಎಷ್ಟು ಫಿಕ್ಸ್ ಮಾಡಿದ್ದಾರೆಂಬುದು ಗೊತ್ತಿಲ್ಲದೆ ನಾವು ಹೇಗೆ ಮಾತನಾಡುವುದು ? ತಾವು ಅವರ ಜೊತೆಯಲ್ಲಿ ಸೇರಿಕೊಂಡು ತಾವೇ ಎಲ್ಲಾ ಮಾಡುವುದಾದರೆ.....

ಅಧ್ಯಕ್ಷರು.—ನಾನೇ ಎಲ್ಲವನ್ನು ಮಾಡಬೇಕೆಂಬುದೇನೂ ಇಲ್ಲ. ಇವತ್ತು ೩ ಗಂಟೆಗೆ ಬಿಜಿನೆಸ್ ಅಡ್ವೈಸರಿ ಮೀಟಿಂಗ್‌ನ್ನು ಕರೆದಿದ್ದೇನೆ. ಹೋದ ಸಾರಿ ಏನು ಆಗಿತ್ತು ಎಂದರೆ, ಎಲ್ಲಾ ಪಕ್ಷದ ನಾಯಕರು. ವಿರೋಧ ಪಕ್ಷದ ನಾಯಕರು ಹಾಗೂ ಸಭಾ ನಾಯಕರು ಸೇರಿ, ಆಗಸ್ಟ್ ತಿಂಗಳ ಕೊನೆಯಲ್ಲಿ ಸಭೆ ಕರೆಯುವುದೆಂದು ಅಂದೇ ನಿಶ್ಚಯವಾಗಿತ್ತು. ಈಗ ೧೦ ದಿವಸ ಅಧಿವೇಶನ ನಡೆಯುತ್ತದೆ. ಬಿಸ್‌ನೆಸ್ ಅಡ್ವೈಸರಿ ಮೀಟಿಂಗ್‌ನ್ನು ಈ ದಿನ ಮಧ್ಯಾಹ್ನ ಕರೆದಿದ್ದೇನೆ. ತಾವು ನನ್ನ ಚೇಂಬರ್‌ನಲ್ಲಿ ಬಿಸ್‌ನೆಸ್ ಫಿಕ್ಸ್ ಮಾಡಿರುವ ಬಗ್ಗೆ ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಚೇಂಬರ್‌ನಲ್ಲಿ ಮಾತನಾಡುವ ವಿಷಯ ಬೇರೆ. ರೂಲ್ಸ್ ಪ್ರಕಾರ ನಡೆಯಬೇಕಾದುದು ನಡೆಯಬೇಕಾಗುತ್ತದೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಬಿಸ್‌ನೆಸ್‌ನ್ನು ಫಿಕ್ಸ್ ಮಾಡದೇ ೧೦ ದಿವಸ ಅಸೆಂಬ್ಲಿ ನಡೆಯುತ್ತದೆ ಎಂದರೆ ಹೇಗೆ ? ನಾನು ಮಂತ್ರಿ ಮಂತ್ರಿಯವರಿಗೂ ಎರಡು ಮೂರು ಪತ್ರಗಳನ್ನು ನಮ್ಮ ರಾಜ್ಯದಲ್ಲಿ ಬಂದಿರುವ ಬರಗಾಲದ ಬಗ್ಗೆ ಬರೆದು ತಿಳಿಸಿದ್ದೇನೆ. ಬರದ ಪರಿಸ್ಥಿತಿಯ ಬಗ್ಗೆ ಮಾತನಾಡುವುದನ್ನು ಬಿಟ್ಟು ಯಾವುದು ಮುಂಚೆ ಬಂದಿದೆಯೋ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಹೇಗೆ ? ಯಾವ ಯಾವ ವಿಷಯದ ವೈಟೇಜ್ ಏನು ಎಂಬುದನ್ನು ತಿಳಿದುಕೊಂಡು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಿ.